| 1 | 2 | 3 | 4 | 5 |
|---|---|---|---|---|
| 5 | ಹಿಪ್ಪರಗಿ | 901.00 | 56.52 | 844.48 |
| 6 | ಮಾರ್ಕಂಡೇಯ | 209.85 | 154.44 | 55.41 |
| 7 | ದೂಧ್‌ಗಂಗಾ | 124.00 | 49.69 | 74.31 |
| 8 | ತುಂಗಾ ಮೇಲ್ದಂಡೆ | 1052.33 | 229.69 | 922.64 |
| 9 | ಕೃಷ್ಣಾ ಮೇಲ್ದಂಡೆ ಯೋಜನೆ | 8568.41 | 7563.27 | 1005.14 |
| 10 | ಸಿಂಗಟಲೂರು | 595.00 | 25.69 | 569.31 |
| | ಒಟ್ಟು: *I* - ಅ | **13668.17** | **9665.45** | **4002.72** |
| ಆ | ಮಧ್ಯಮ ನೀರಾವರಿ ಯೋಜನೆಗಳು | | | |
| 11 | ಅಮರ್ಜಾ | 109.43 | 100.96 | 8.47 |
| 12 | ಕೆಳದಂಡೆ ಮುಲ್ಲಾಮಾರಿ | 134.06 | 123.00 | 11.05 |
| 13 | ಗಂಡೋರಿವಾಲಾ | 132.95 | 72.21 | 60.74 |
| 14 | ಬಸಾಪುರ ಏತ | 14.00 | 1.49 | 12.51 |
| 15 | ಹಿರೇಹಳ್ಳ | 158.70 | 145.18 | 13.52 |
| 16 | ಹೊದಿರಾಯನಹಳ್ಳ | 9.20 | 0.47 | 8.73 |
| 17 | ಮಸ್ಕಿನಾಲಾ | 42.44 | 38.98 | 3.46 |
| 18 | ಇಟಗಿ-ಸಾಸಲವಾಡ ಏತ | 18.50 | 0.62 | 17.88 |
| 19 | ಹರಿನಾಲಾ | 55.56 | 43.26 | 12.30 |
| 20 | ಕಳಸ ಮತ್ತು ಬಂಧೂರ ನಾಲಾ | 93.98 | | 93.98 |
| 21 | ಭೀಮಾ ಹರಿ | 185.18 | 0.50 | 184.68 |
| | ಒಟ್ಟು *I* - ಆ | **954.00** | **526.67** | **427.33** |
| | ಒಟ್ಟು: | **14622.17** | **10192.12** | **4430.05** |
| *II* | ಕಾವೇರಿ ಕೊಳ್ಳ | | | |
| ಅ | ಭಾರಿ ನೀರಾವರಿ ಯೋಜನೆಗಳು | | | |
| 1 | ಡಿ ದೇವರಾಜ್ ಅರಸು ಕಾಲುವೆ | 326.00 | 274.88 | 51.12 |
| 2 | ಹಾರಂಗಿ | 373.00 | 321.01 | 51.99 |
| 3 | ಕಬಿನಿ | 1233.00 | 385.60 | 847.40 |

**ಬೆಂಗಳೂರು ನಗರ ಪ್ರದೇಶದಲ್ಲಿನ ಗ್ರಾಹಕರ ವೇದಿಕೆಗಳು**

1691 (2339) ಶ್ರೀ ಪ್ರಭಾಕರ ಬಂಗೇರ ಕೆ. ( ಬೆಳ್ತಂಗಡಿ ) - ಸಾಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಪ್ರದೇಶದಲ್ಲಿರುವ ಗ್ರಾಹಕರ ವೇದಿಕೆಗಳ ಒಟ್ಟು ಸಂಖ್ಯೆ ಎಷ್ಟು ; ಅವುಗಳು ಯಾವ ಯಾವ ದಿನಾಂಕದಿಂದ ಕಾರ್ಯಾರಂಭ ಮಾಡಿವೆ ;

ಆ) 2002ನೇ ಸಾಲಿನಲ್ಲಿ ಎಷ್ಟು ಗ್ರಾಹಕ ವೇದಿಕೆಗಳು ಸ್ಥಾಪಿಸಲ್ಪಟ್ಟವು ; ಅವುಗಳಿಗೆ ಪೂರ್ಣಪ್ರಮಾಣದಲ್ಲಿ ಸದಸ್ಯರ ಮತ್ತು ಅಧ್ಯಕ್ಷರುಗಳ ನೇಮಕವನ್ನು ಮಾಡಲಾಗಿದೆಯೇ ; (ವಿವರಗಳನ್ನು ಒದಗಿಸುವುದು) ;

ಇ) ಈ ಗ್ರಾಹಕ ವೇದಿಕೆಗಳಿಗೆ ಸಾರ್ವಜನಿಕರಿಂದ ಬಂದ ಅರ್ಜಿಗಳ ಸಂಖ್ಯೆ ಎಷ್ಟು ಮತ್ತು ಅವುಗಳಿಗೆ ತೀರ್ಪು ನೀಡದೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ;

ಈ) ಗ್ರಾಹಕರ ವೇದಿಕೆಗಳು ಸ್ಥಾಪಿಸಲ್ಪಟ್ಟ ಕೂಡಲೇ ಕಾರ್ಯಾರಂಭ ಮಾಡುವ ನಿಯಮಗಳು ಜಾರಿಯಲ್ಲಿವೆಯೇ ; ಕಾರ್ಯಾರಂಭ ವಿಳಂಬವಾಗದಂತೆ ಸರ್ಕಾರದವರು ಸೂಕ್ತ ಕ್ರಮವನ್ನು ಜರುಗಿಸುವರೆ ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಬೆಂಗಳೂರು ನಗರದಲ್ಲಿ ಒಟ್ಟು 6 ಜಿಲ್ಲಾ ಗ್ರಾಹಕರ ವೇದಿಕೆಗಳು ಇರುತ್ತವೆ. ಅವುಗಳ ಕಾರ್ಯಾರಂಭ ದಿನಾಂಕ ಕೆಳಗಿನಂತಿವೆ:

| | | |
|---|---|---|
| 1. | ಬೆಂಗಳೂರು ನಗರ ಪ್ರಧಾನ | 22.9.1989 |
| 2. | ಬೆಂಗಳೂರು ನಗರ 1ನೇ ಅಪರ (ಬೆಂಗಳೂರು ಗ್ರಾಮಾಂತರ ಜಿಲ್ಲಾ ವೇದಿಕೆಯೊಂದಿಗೆ ಸೇರಿಸಿದೆ) | 11.1.1994 |
| 3. | ಬೆಂಗಳೂರು ನಗರ 2ನೇ ಅಪರ | 14.10.1996 |
| 4. | ಬೆಂಗಳೂರು ನಗರ 3ನೇ ಅಪರ | 4.9.2002 |
| 5. | ಬೆಂಗಳೂರು ನಗರ 4ನೇ ಅಪರ | 2.9.2002 |
| 6. | ಬೆಂಗಳೂರು ಗ್ರಾಮಾಂತರ | 23.11.1991 |

ಆ) 2002ನೇ ಸಾಲಿನಲ್ಲಿ ಬೆಂಗಳೂರು ನಗರ 3ನೇ ಮತ್ತು 4ನೇ ಅಪರ ವೇದಿಕೆಗಳು ಮಾತ್ರ ಸ್ಥಾಪಿಸಲ್ಪಟ್ಟಿದ್ದು, ದಿನಾಂಕ 24.2.2003ರಂದು ಕಾರ್ಯಾರಂಭ ಮಾಡಿವೆ. ಅವುಗಳಿಗೆ ಪೂರ್ಣಪ್ರಮಾಣದಲ್ಲಿ ಈ ಕೆಳಕಂಡ ಸದಸ್ಯರು ಮತ್ತು ಅಧ್ಯಕ್ಷರ ನೇಮಕ ಮಾಡಲಾಗಿದೆ.

| ಕ್ರಮ ಸಂ. | ವೇದಿಕೆಯ ಹೆಸರು | ನೇಮಕವಾಗಿರುವವರ ಹೆಸರು ಮತ್ತು ಹುದ್ದೆ |
|---|---|---|
| 1 | ಬೆಂಗಳೂರು ನಗರ 3ನೇ ಅಪರ | ಶ್ರೀ ಶ್ರೀವತ್ಸ ಕೆಡಿಲಾಯಾ ಅಧ್ಯಕ್ಷರು |
| 2 | ಬೆಂಗಳೂರು ನಗರ 3ನೇ ಅಪರ | ಶ್ರೀಮತಿ ಲೀಲಾವತಿ ಮಹಿಳಾ ಸದಸ್ಯರು |
| 3 | ಬೆಂಗಳೂರು ನಗರ 3ನೇ ಅಪರ | ಶ್ರೀ ಲಕ್ಷ್ಮೀನಾರಾಯಣ ಸದಸ್ಯರು |
| 4 | ಬೆಂಗಳೂರು ನಗರ 4ನೇ ಅಪರ | ಶ್ರೀ ಜಿ. ಸಿದ್ದನಗೌಡ ಅಧ್ಯಕ್ಷರು |
| 5 | ಬೆಂಗಳೂರು ನಗರ 4ನೇ ಅಪರ | ಶ್ರೀಮತಿ ಪದ್ಮಾವತಿ ಕೆ ಕಾಖಂಡಕಿ, ಸದಸ್ಯರು |
| 6 | ಬೆಂಗಳೂರು ನಗರ 4ನೇ ಅಪರ | ಶ್ರೀ ಸಿ ರಾಮಚಂದ್ರಪ್ಪ, ಸದಸ್ಯರು |

ಇ) ಕೆಳಕಂಡ ವೇದಿಕೆಗಳು ಪ್ರಾರಂಭವಾದಾಗಿನಿಂದ ದಿನಾಂಕ 28.2.2003ರ ಅಂತ್ಯದವರೆಗೆ ದಾಖಲಾಗಿರುವ, ಇತ್ಯರ್ಥವಾಗಿರುವ ಹಾಗೂ ಬಾಕಿ ಇರುವ ಪ್ರಕರಣಗಳು ಈ ಮುಂದಿನಂತಿರುತ್ತವೆ:

| ವೇದಿಕೆಯ ಹೆಸರು | ದಾಖಲಾದ ಒಟ್ಟು ಪ್ರಕರಣಗಳು | ಇತ್ಯರ್ಥವಾದ ಒಟ್ಟು ಪ್ರಕರಣಗಳು | ಬಾಕಿ ಇರುವ ಒಟ್ಟು ಪ್ರಕರಣಗಳು |
|---|---|---|---|
| 1 ಬೆಂಗಳೂರು ಪ್ರಧಾನ | 19088 | 18472 | 616 |
| 2 ಬೆಂಗಳೂರು ನಗರ 1ನೇ ಅಪರ (ಬೆಂಗಳೂರು ಗ್ರಾಮಾಂತರ ಜಿಲ್ಲಾ ವೇದಿಕೆಯೊಂದಿಗೆ ಸೇರಿಸಿದೆ) | 4601 | 3969 | 632 |
| 3. ಬೆಂಗಳೂರು ನಗರ 2ನೇ ಅಪರ | 5506 | 4553 | 953 |
| 4. ಬೆಂಗಳೂರು ನಗರ 3ನೇ ಅಪರ | 33 | | 33 |
| 5. ಬೆಂಗಳೂರು ನಗರ 4ನೇ ಅವರ | 31 | | 31 |
| 6. ಬೆಂಗಳೂರು ಗ್ರಾಮಾಂತರ | 415 | 381 | 345 |
| ಒಟ್ಟು | **29674** | **27375** | **2299** |

ಈ) ಗ್ರಾಹಕರ ವೇದಿಕೆಗಳು ಸ್ಥಾಪಿಸಲ್ಪಟ್ಟ ಕೂಡಲೇ ಕಾರ್ಯಾರಂಭ ಮಾಡುವ ಬಗ್ಗೆ ನಿಯಮಗಳು ಏನೂ ಇರುವುದಿಲ್ಲ. ಸಾಮಾನ್ಯ ನೀತಿಯನುಸಾರ ಗ್ರಾಹಕರ ವೇದಿಕೆಗಳು ಸಂಪೂರ್ಣವಾಗಿ ಸ್ಥಾಪಿಸಲ್ಪಟ್ಟ ಕೂಡಲೇ ಕಾರ್ಯಾರಂಭವನ್ನು ಮಾಡುತ್ತವೆ. ಕಾರ್ಯಾರಂಭ ವಿಳಂಬವಾಗದಂತೆ ಎಲ್ಲಾ ಕ್ರಮ ಜರುಗಿಸಲಾಗುತ್ತಿದೆ.

## ಭಾಲ್ಕಿ ಕೃಷಿ ಮಾರುಕಟ್ಟೆಯಲ್ಲಿನ ನಿವೇಶನಗಳು

1692 (2117) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) - ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಿಂದ ಭಾಲ್ಕಿ ಕೃಷಿ ಮಾರುಕಟ್ಟೆಯಲ್ಲಿ ಖಾಲಿ ನಿವೇಶನಗಳನ್ನು ಯಾವ ವ್ಯಕ್ತಿಗಳಿಗೆ ಯಾವ ದರದಲ್ಲಿ ಕೊಡಲಾಗಿದೆ ; (ವಿವರ ಒದಗಿಸುವುದು) ;

ಆ) ಈಗಿನ ದಾಖಲೆಯಂತೆ ಖಾಲಿ ಇರುವ ನಿವೇಶನಗಳ ಸಂಖ್ಯೆ ಎಷ್ಟು ;

ಇ) ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಏನು ಕ್ರಮ ಜರುಗಿಸಲಾಗಿದೆ ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ಕಳೆದ ಎರಡು ವರ್ಷಗಳಲ್ಲಿ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.

ಆ) 123 ನಿವೇಶನಗಳು ಇರುತ್ತವೆ.

ಇ) ಇಲ್ಲ.

ಪ್ರಶ್ನೆ ಉದ್ಭವಿಸುವುದಿಲ್ಲ.